


ಹಂದಲಗೆರೆ ಗಿರೀಶ್

# ಪ್ರೇಮವೆಂಬುದು ಸಕಲರಿಗೂ ಬಹುವಚನ

ಪ್ರೇಮ, ಯುಗಾಂತರ ಜೀವಸಂಕುಲವ ಚಲನೆಯಲ್ಲಿಟ್ಟಿರುವ ಇಂಧನ. ಪ್ರೇಮವಿಲ್ಲದ ಕಣ್ಣಿಗೆ ಬದುಕಿನ ಸೌಂದರ್ಯ ದಕ್ಕುವುದಾದರೂ ಹೇಗೆ? ಪ್ರೀತಿಗೆ, ನೀತಿಗೆ, ಕ್ರಾಂತಿಗೆ, ಶಾಂತಿಗೆ ಪ್ರೇಮವೇ ರಹದಾರಿ ಎಂದು ನಂಬಿರುವವನು ನಾನು.

ಇತ್ತೀಚಿನ ಕವಿಗಳು ಪ್ರೇಮಕವಿತೆಗಳನ್ನು ಬರೆಯುವುದೇ ಇಲ್ಲ ಎಂಬ ಮಾತು ಕೇಳಿದ್ದೇನೆ, ನನಗೆ ಹಾಗನ್ನಿಸುವುದಿಲ್ಲ. ಹಾಗೆ ನೋಡಿದರೆ ಬಹುಪಾಲು ಕವಿಗಳ ಕಾವ್ಯ ಪಯಣ ಶುರುವಾಗುವುದೇ ಪ್ರೇಮಾಲಾಪದಿಂದ. ಆದರೆ ಪ್ರೇಮ ಕವಿತೆಗಳ ಸಂಖ್ಯೆ ಕ್ಷೀಣಿಸಿರುವುದನ್ನಂತೂ ಅಲ್ಲಗಳೆಯಲಾಗುವುದಿಲ್ಲ. ಈಗೀಗ ನವತಲೆಮಾರಿನ ಕವಿಗಳು ಹೆಚ್ಚು ಸಾಮಾಜಿಕ, ರಾಜಕೀಯ ವಿಷಯಗಳೆಡೆಗೆ ಮುಖ ಮಾಡಿದ್ದಾರೆ ಎನ್ನಬಹುದು. ಅದು ಕಾಲದ ಅನಿವಾರ್ಯತೆಯೂ ಆಗಿರಬಹುದು.